

# ಮುಚ್ಚರಳುವ ಪುಷ್ಕರಣಿ

– ಡಾ. ಸತ್ಯ

ಹೂವೊಂದು ಅರಳಿದರೆ ಮತ್ತೆ ಮುಚ್ಚುವುದುಂಟೆ? ನೋಡಿ ಸೃಷ್ಟಿಯ ಈ ವಿಚಿತ್ರ! ಹಾಗಿರುವ ಈ ಹಳದಿ ಬಂಗಾರ ಬಣ್ಣದ ಹೂವಿನ ಮೋಡಿನೋಡಿ. ಮಧುವೀಂಟಲು ಸಂಜೆ ವೇಳೆ ಅಕಸ್ಮಾತ್ ದುಂಬಿಯೋ ಜೇನ್ನೊಣವೋ ಬಂದು ಮಧುಪಾನದಿಂದ ಮೈಮರೆತು ಮಲಗಿತೆನ್ನಿ. ಬಂಗಾರದ ಪಕಳೆಗಳು ಮುಚ್ಚಿಬಿಡುತ್ತವೆ. ಮರುದಿನ ಮುಂಜಾನೆ ತನಕ ಈ ಕೀಟಕ್ಕೆ ಬಂಗಾರ ಪಂಜರದ ಬಂಧನ ನಿಶ್ಚಯ. ಹೀಗೆ ನಾಲ್ಕಾರು ದಿನ ಈ ಕಣ್ಣಾಮುಚ್ಚಾಲೆ ಆಟ ಆಡುವ ವಿಚಿತ್ರ ಸಸ್ಯ ತಿಳಿದಿದೆಯೇ?

ಕುಂಡಕೃಷಿ ಅಥವಾ ಪಾತಿಗೆ ಈ ಗಿಡ ಯೋಗ್ಯ ಕರಿಯ ಕಿರಿ ಬೀಜದಿಂದ ಹೊಸ ಗಿಡ ಸಾದ್ಯ. ಒಮ್ಮೆ ಚಿಗುರಿದರೆ ಹತ್ತಾರು ಸಸಿಗಳು ಕಳೆಯಂತೆ ಒಮ್ಮೆಲೇ ಬೆಳೆಯುವ ಪುಷ್ಕರಿಣಿ ವಾಸ್ತವವಾಗಿ ಹಾದಿಬೀದಿಯ ಕಳೆಯೆಂದೆ ಕಳೆದ ಶತಮಾನದ ಸಸ್ಯಶಾಸ್ತ್ರಜ್ಞ ಗ್ಯಾಂಬಲನ ಹೇಳಿಕೆ.

ಈ ಗಿಡ ಭಾರತ ಮೂಲದ್ದಲ್ಲ.  ವೆಸ್ಟ್ ಇಂಡೀಸ್ ಮೂಲದ್ದು. ವಸಾಹತುಶಾಹಿಗಳ ಕಾಲದಲ್ಲಿ ಪ್ರಾಯಶ: ನಮ್ಮಲ್ಲಿಗೆ ಕಾಲಿರಿಸಿತು. ಟರ್ನೆರೇಸಿ ಕುಲದ ಈ ಸಸ್ಯಕ್ಕೆ ಪಾರಿಭಾಷಿಕ ಹೆಸರು ಟರ್ನೆರಾ ಅಲ್ಮಿಫೋಲಿಯ. ಈ ಸಸ್ಯದ ಎಲಿಗೆನ್ಸ ಹಾಗು ಅಂಗುಸ್ಟಿಫೋಲಿಯಾ ಎಂಬ ಎರಡು ಪ್ರಭೇದಗಳು ಬಹುತೇಕ ಒಂದೇ ಥರ. ಎರಡೂ ಸಹ ಮನೆಯಂಗಳದ ಕೃಷಿಗೆ ಯೋಗ್ಯ. ಮೊದಲದರ ಎಲೆ ಕೊಂಚ ಅಗಲ ಕಿರಿದು ಹಾಗು ಎಲೆಯಂಚು ಕಡಿಮೆ ದಂತುರ.(ಹಲ್ಲಿನಾಕಾರದ ರಚನೆ) ಎರಡನೆಯದರ ಎಲೆ ಹೆಚ್ಚು ಉದ್ದ ಹಾಗು ಎಲೆಯಂಚು ಹೆಚ್ಚು ದಂತುರ. ಮೊದಲನೆಯ ಪ್ರಭೇದವು ನಮ್ಮ ರಾಜ್ಯದಲ್ಲಿ ಹೆಚ್ಚು ಸಾಮಾನ್ಯ.

ಒರಿಯ ಭಾಷೆಯಲ್ಲಿ ಬಸಂತಿ. ಮರಾಠಿಯ ಭಿಂಜಿರ. ಮಲೆಯಾಳದ ಚೆರುವಾತಾಳಿ. ಆಂಗ್ಲಭಾಷೆಯ ಹೆಸರು ವೆಸ್ಟ್ ಇಂಡಿಯನ್ ಹೋಲಿ ಸೇಜ್ರೋಸ್. ಹೀಗಾಗಿ ಈ ಹೆಸರಿನ ಹಿಂದೆ ಆ ದೇಶದ ಪೂಜಾರ್ಹ ಬಳಕೆ ಸಿಧ್ಧ.

ಪುಷ್ಕರಣಿಯು ವರ್ಷವಿಡಿ ಹೂಬಿಡುವ ಗಿಡ. ಎಲೆಯ ಕಷಾಯ ಕುಡಿಸಿದರೆ ಮಕ್ಕಳ, ಜಾನುವಾರುಗಳ ಭೇದಿ ಕಾಯಿಲೆ ವಾಸಿ. ಅಷ್ಟೆಅಲ್ಲ. ಜಾನುವಾರಿನ ಉತ್ತಮ ಮೇವಾಗಿ ಎಲೆ ಬಳಕೆ ಇದೆ. ಎದೆಯ ಕಫ ಸಂಚಯ,ಕೀಲುಸಂದಿನ ನೋವು ಮತ್ತು ಪಿತ್ತ ವಿಕಾರದಲ್ಲಿ ಪುಷ್ಕರಿಣಿಬಳಕೆಯ ಉಲ್ಲೇಖ ಇದೆ. ಆದರೆ ಯಾರೂ ಬಳಸುವ ಉದಾಹರಣೆ ಕಂಡುಬರುತ್ತಿಲ್ಲ.

ಈ ವಿಚಿತ್ರ ಸಸ್ಯ ನಿಮ್ಮ ಮನೆಯಂಗಳದಲ್ಲಿಲ್ಲವೇ? ಹಾಗಿದ್ದರೆ ನೆಟ್ಟು ಬೆಳೆಸಿರಿ ನಾಲ್ಕಾರು ಜನಕ್ಕೆ ಪರಿಚಯಿಸಿರ.  ಎಳೆಯ ಮಕ್ಕಳಿಗೆಈ ಹೂವಿನ ಕಣ್ಣಾಮುಚ್ಚಾಲೆ ಆಟವನ್ನು ನಿರೀಕ್ಷಿಸಲು ಪ್ರೇರೇಪಿಸಿರಿ.

***